ಬಿಟ್ಟು ಮುಂದುವರೆದಳು. ಸಾಗುವಾಗ ರಸ್ತೆಯ ಪಕ್ಕದಲ್ಲಿ ಒಂದು ಮರ ನೇರಳೆ ಬಣ್ಣದ ಹೂವುಗಳನ್ನು ಅರಳಿಸಿಕೊಂಡು ಮೋಹಕವಾಗಿ ನಗುತ್ತಿತ್ತು. ಜೊತೆಗೆ ನೆನ್ನೆಯ ಹೂವುಗಳೆಲ್ಲ ಕೆಳಗೆ ಬಿದ್ದು ನೆಲಕ್ಕೆ ಹೂವಿನ ಚಾದರವನ್ನು ಹೊದಿಸಿದಂತೆ ಕಾಣುತ್ತಿತ್ತು. ತನ್ನ ಸ್ಕೂಟರನ್ನು ನಿಲ್ಲಿಸಿದಳು. ತನ್ನ ಬ್ಯಾಗಿನ ಒಳಗಿಂದ ಮೊಬೈಲನ್ನು ತೆಗೆದು ಆ ಸುಂದರ ದೃಶ್ಯದ ಫೋಟೊ ತೆಗೆದುಕೊಂಡಳು. ಮೊಬೈಲ್ ಫೋನಿನ ಸ್ಕ್ರೀನಿನ ಮೇಲೆ ಪುನರ್ವಸುವಿನ ಫೋಟೊ. ಒಂದು ಕ್ಷಣ ಅದನ್ನೇ ನೋಡುತ್ತ ನಿಂತಳು. ಮೆಸೇಜ್ ಆ್ಯಪ್ ಮೇಲೆ ಒತ್ತಿದಳು. ಅದು ತೆರೆದುಕೊಂಡಿತು. ಪುನರ್ವಸುವಿನ ನಂಬರನ್ನು ಆಯ್ಕೆ ಮಾಡಿ ಕಷ್ಟ ಆಗುತ್ತಿದೆ, ಪ್ಲೀಸ್ ಬಾ ಬೇರೆ ಹೋಗೋಣ. ನಮ್ಮದೇ ಪ್ರಪಂಚ. ನಾನು, ನೀನು, ಮಗಳು... ನಮ್ಮದೇ ಬದುಕು ಕಟ್ಟಿಕೊಳ್ಳೋಣ. ನಿನಗೆ ನನ್ನ ಬಗ್ಗೆ ಯೋಚಿಸುವುದಕ್ಕಿಂತ ನಿನ್ನ ಕುಟುಂಬದವರೇ ಹೆಚ್ಚು. ಆದರೆ, ಅವನಿಗೆ ಕಳುಹಿಸಲಿಲ್ಲ. ಡ್ರಾಫ್ಟ್‌ನಲ್ಲಿ ಸೇವಾಯಿತು.

ಮನೆಯಲ್ಲಿ ಪುನರ್ವಸುವನ್ನು ಅವನ ಅಪ್ಪ, ನಿನ್ನ ಜೊತೆ ನಾನು ಬರುವೆ ಕರೆದುಕೊಂಡು ಹೋಗು ಎಂದು ಕೇಳಿದರು. ಅದಕ್ಕೆ ಅವನು ನೀವು ಎಲ್ಲಿಗೆ ಬರುತ್ತೀರಾ ಎಂದ. ಏನೋ ಕೆಲಸ ಇದೆ. ನಿಮ್ಮ ಅಪ್ಪ ನಿನ್ನ ಜೊತೆ ಯಾಕೆ ಬರುತ್ತಾರೆಂದು ನನಗೆ ಗೊತ್ತು ಎಂದಳು. ಮುಂದುವರೆಸಿ, ಆಯಿತು ಹೋಗಿ, ಆದರೆ ಅವಳ ಮನಸ್ಸಿಗೆ ನೋವು ಮಾಡಬೇಡಿ. ಇವರು ಆಡುವ ಮಾತುಗಳನ್ನು ಕೇಳಿದ ಮಗ ಪುನರ್ವಸು ತನ್ನ ಮತ್ತು ಕಿರಣಳ ನಡುವೆ ನಡೆಯುತ್ತಿರುವ ಶೀತಲ ಸಮರವನ್ನು ಗಮನಿಸಿದ್ದುದನ್ನು ಕಂಡು ಆಶ್ಚರ್ಯಗೊಂಡ. ಬೇಡ, ಅಂತದ್ದೇನು ಆಗೊಲ್ಲ. ನೀವೇನು ಬೇಡ ಎಂದ. ಅದಕ್ಕೆ ಅವನ ಅಪ್ಪ ಸುಮ್ಮನೆ ಗಾಡಿ ಸ್ಟಾರ್ಟ್ ಮಾಡು, ನಡೆ ಎಂದ. ಅಪ್ಪ, ಪ್ಲೀಸ್ ಬೇಡ ಎಂದು ಅವರನ್ನು ಮನೆಯಲ್ಲಿಯೇ ಬಿಟ್ಟು ಒಬ್ಬನೇ ತನ್ನ ಕಾರನ್ನು ಚಾಲು ಮಾಡಿಕೊಂಡು ಹೊರಟ.

ಕಾಲೇಜಿನ ಕಡೆ ಮುಖ ಮಾಡದೆ ಕೋಟೆಯ ಕಡೆ ಹೊರಟ. ಉಯ್ಯಾಲೆ ಕಂಬ, ಗಾಳಿ ಗೋಪುರ. ಅವುಗಳನ್ನೇನು ನೋಡಲಿಲ್ಲ, ಆದರೆ ಅವೇ ಇವನನ್ನು ನೋಡಿದವು. ಸಂಪಿಗೆ ಸಿದ್ಧೇಶ್ವರ ಅಂಗಳದ ಕಡೆಯಿಂದ ಸಂಪಿಗೆ ವಾಸನೆ ಮೂಗಿನ ಬದಿಯಲ್ಲಿ ಹಾದುಹೋಗುತ್ತಿದೆ. ದೇಹದ ಹೊರಗೆ ಮತ್ತು ಒಳಗೆ ಹಬ್ಬಿಕೊಳ್ಳುತ್ತಿದೆ. ಆದರೆ, ಅದರ ಪರಿವಿಲ್ಲ ಅವನಿಗೆ. ಪಕ್ಕದ ಕಲ್ಲ ಮಠದ ಒಳಗೆ ಅವನ ಕಾಲುಗಳು ಹೋದವು. ಧುತ್ತೆಂದು ಬೆಳಕು ಮುರಿದು, ಕತ್ತಲ ವ್ಯೋಮ. ಘನಗೊಂಡಿದೆ ಕತ್ತಲು.

ಒಳಗೆ ದಟ್ಟವಾದ ಮೌನ. ಉಸಿರೂ ಸಹ. ಅನೂಹ್ಯವಾದಂತಹ ಕತ್ತಲ ಬಯಲು. ಒಳಗೆ ಹೆಜ್ಜೆಗಳ ಹಾಕುತ್ತಾ ಹೋದ. ತಡಕಿದ. ಕಲ್ಲ ಕಂಬ. ಮತ್ತೆ ಮುಂದಕ್ಕೆ ಸರಿದ. ಬೆರಳುಗಳು ಕಣ್ಣುಗಳು. ಚಾಚಿದ ಗೋಡೆಯಂತಹ ಕಲ್ಲು. ಅವನ ಅಸ್ತಿತ್ವವೇ ಕರಗಿದೆ ಆ ಕತ್ತಲಲ್ಲಿ. ತನಗೆ ಅರಿವಾಗದಂತೆ ಕಾಲುಗಳು ಸರಿದದ್ದೇ ದಿಕ್ಕು. ಏನೋ ಕಾಲಿಗೆ ತಾಗಿ ಎಡವಿದ, ಕೈಗಳು ಜಾಗೃತಗೊಂಡು ಮುಂದೆ ಏನಾದರೂ ಇದೆಯೇನೋ ಹಿಡಿದುಕೊಳ್ಳಲು ಎಂಬತೆ ಚಾಚಿಕೊಂಡವು. ಆದರೆ, ಖಾಲಿ ಕತ್ತಲ ಬಯಲು. ಇನ್ನಷ್ಟು ಕತ್ತಲು ಪ್ರಜ್ಞಾಪೂರ್ವಕವಾಗಿ ಈಗ ಉಸಿರು. ಇದ್ದಕ್ಕಿದ್ದಂತೆ ಓರೆಯಲ್ಲಿ ಒಂದು ಹೊಳೆಯುವ ಘನ ವಸ್ತು ಬಿದ್ದಿರುವಂತೆ ಕಂಡಿತು. ಹಿಡಿದ. ಸಿಗಲಿಲ್ಲ. ಅರೆ! ಏನಿದು ಅಂದುಕೊಂಡ. ಆಶ್ಚರ್ಯವಾಗಿ ಕೈಯನ್ನು ಆಚೆ ಈಚೆ ಆಡಿಸಿದ. ಇದೇನಿದು, ಹಿಡಿದರೂ ವಸ್ತುವಿನ ಅನುಭವವಿಲ್ಲ. ಕ್ಷಣ ನಿಂತ ಬೆಳಕಿನ ಗೆರೆ. ಅದರ ಪರಿಧಿಯಲ್ಲಿ ಅಸಂಖ್ಯ ಕಣಗಳು. ಕತ್ತಲಲ್ಲಿ ಕಾಣದಿದ್ದುದು ಬೆಳಕಲ್ಲಿ. ಬೆಳಕು ಎಲ್ಲವನೂ ತೋರಿಸುತ್ತೆ. ಕಿರಣ, ಯಾಕೆ, ಏನಾಯಿತು, ಇಲ್ಲ ನಿನಗೆ ತೀವ್ರವಾಗಿ ಏನೋ ನಮ್ಮಿಂದ ಗಾಸಿ ಆಗಿದೆ. ಆದರೆ, ಇರುವಲ್ಲೇ ಪಡೆದುಕೊಳ್ಳಬೇಕು ಅಲ್ಲವಾ? ಜಗತ್ತೇ ತುಂಬಿದೆ ಕಣಗಳಲ್ಲಿ, ಅಣುಗಳಲ್ಲಿ. ತೋರಿಸುತ್ತಿದೆ ಬೆಳಕು ಅವುಗಳನ್ನು. ಇರುವ ವಾಸ್ತವವ ಇಲ್ಲವಾಗಿಸಲಾಗುವುದೇ, ಕಣವಿಲ್ಲದ ಆವರಣವೆಲ್ಲಿ, ಬೆಳಕಿಗೆ ಕಾಣುವವು. ಕಣದಲ್ಲೇ ಎಲ್ಲ. ಬೇಕಿರುವುದು ಬೆಳಕು. ಕಾಣಲು. ಕಂಡು ಕಣಗಳ ನಡುವೆಯೇ ಇರುವಿಕೆ.



ಹೊರಬಂದ. ಬಿಸಿಲು. ಮೃದುವಾಗುತ್ತಿದೆ. ಇಳಿದು